**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 10.09.2021.

**1] ತಿಕೋಟಾ ಪೊಲೀಸ ಠಾಣೆ ಗುನ್ನೆ ನಂ: 136/2021 ಕಲಂ: 279, 337, 304(ಎ) ಐಪಿಸಿ**

ದಿನಾಂಕ: 08.09.2021 ರಂದು 17:45 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೈತ್ ಸಾಬು ತಂದೆ ಕೃಷ್ಣಪ್ಪ ಮಿಸಾಳ ಸಾ–ರತ್ನಾಪೂರ ನಂಬರ ಇಲ್ಲದ ಹೊಸ ಪ್ಲಾಟಿನಾ ಮೋಟಾರ್ ಸೈಕಲ್ ಚಾಲಕ ಈತನು ತಾನೂ ನಡೆಸುತ್ತಿದ್ದ ಹೊಸ ಪ್ಲಾಟಿನಾ ಮೋಟಾರ್ ಸೈಕಲ್‌ನ್ನು ತಿಕೋಟಾ ಕಡೆಯಿಂದ ರತ್ನಾಪೂರ ಕಡೆಗೆ ಅತೀ ಜೋರಿನಿಂದ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ರತ್ನಾಪೂರದಿಂದ ತಿಕೋಟಾ ಕಡೆಗೆ ಹೊರಟ ನಮ್ಮೂರ ಮಹಾಂತೇಶ ಸಾಬು ಖಂಡೇಕರ ಈತನ ಮೋಟಾರ್ ಸೈಕಲ್ ನಂ ಕೆಎ–28 ಇಎಫ್–1986 ನೇದ್ದಕ್ಕೆ ಎದುರಿನಿಂದ ಡಿಕ್ಕಿಪಡಿಸಿ ಅಫಘಾತ ಪಡಿಸಿ ಮಹಾಂತೇಶ ಖಂಡೇಕರ ಈತನಿಗೆ ಸಾಧಾ ಗಾಯಪೆಟ್ಟು ಪಡಿಸಿದ್ದು ಅಲ್ಲದೇ ಅವನ ಮೋಟಾರ್ ಸೈಕಲ್ ಹಿಂದೆ ಕುಳಿತ ಮಲ್ಲೇಶಿ ಸಾಬು ಖಂಡೇಕರ ಈತನಿಗೂ ಸಾಧಾ ಗಾಯಪೆಟ್ಟು ಪಡಿಸಿದ್ದು ಅಲ್ಲದೇ ಇದರಲ್ಲಿ ಪಿರ್ಯಾದಿ ಗಂಡನಿಗೆ ಹೊಟ್ಟೆಗೆ, ಎದೆಗೆ ಭಾರಿ ಒಳಪೆಟ್ಟು ಹೊಂದಿ ಉಪಚಾರ ಕುರಿತು ಅಲ್ ಅಮೀನ್ ಆಸ್ಪತ್ರೆಗೆ ಹೋಗಿ ಅದರ ಹೆಚ್ಚಿನ ಉಪಚಾರ ಕುರಿತು ಮೀರಜಕ್ಕೆ ಹೋಗುವಾಗ ದಾರಿಯಲ್ಲಿ ಮರಣ ಹೊಂದಿದ್ದು ಇರುತ್ತದೆ.ಅಂತಾ ಫಿರ್ಯಾಧಿಯಲ್ಲಿ ನಮೂದ ಅದೆ. ಈ ಬಗ್ಗೆ ಸವೀತಾ ಸಾಬು ಮೀಸಾಳ ಸಾ॥ ರತ್ನಾಪೂರ ತಾ॥ತಿಕೋಟಾ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.09.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ ಠಾಣೆ ಗುನ್ನಾ ನಂ: 106/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 04.09.2021 **ರಂದು 7.00** ಗಂಟೆಗೆಯಿಂದ 07.30 ಗಂಟೆಯ ನಡುವಿವ ಅವದಿಯಲ್ಲಿ ಇದರಲ್ಲಿಯ ಕಾಣೆಯಾದ ಲಕ್ಷ್ಮೀ ತಂ॥ ಬಸಪ್ಪ ಮುಳಸಾವಳಗಿ , ವಯಾ: 23 ವರ್ಷ, ಸಾ॥ ಆದರ್ಶ ನಗರ ಶಾಂತಿ ನಿಕೇತನ ಸ್ಕೂಲ ಹತ್ತಿರ ವಿಜಯಪುರ ಲಕ್ಷ್ಮಿ ಇವಳು ಪಿಂಕ ಕಲರಿನ ಚೂಡಿದಾರ ಧರಿಸಿಕೊಂಡು ಸಾಯಂಕಾಲ 7–30 ಗಂಟೆಗೆ ಮನೆಯ ಬಾಗಿಲಕ್ಕೆ ಬೀಗ ಹಾಕಿ ಬೀಗದ ಕೀಲಿ ಕೊಟ್ಟು ನನ್ನ ಅಜ್ಜಿಯ ಮನೆಗೆ ಹೋಗುತ್ತೇನೆ ಅಂತಾ ಹೇಳಿ ಹೋಗಿರುತ್ತಾಳೆ, ಇವಳು ಅಜ್ಜಿಯ ಮನೆಗೆ ಹೋದೆ ಎಲ್ಲಿಯೋ ಹೋಗಿ ಕಾಣೆಯಾಗಿದ್ದು ಅದೆ. ಈ ಬಗ್ಗೆ ಸಂಗನಬಸವ್ವ ಬಸಪ್ಪ ಮುಳಸಾವಳಗಿ ಸಾ॥ ಆದರ್ಶ ನಗರ ಶಾಂತಿ ನಿಕೇತನ ಸ್ಕೂಲ ಹತ್ತಿರ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 286/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ: 09.09.2021 ರಂದು 17.30 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ವಿಶ್ವನಾಥ ತುಕಾರಾಮ ತೆಲಸಂಗ ಸಾ॥ ಅಲ್ಲಾಪೂರ ಓಣಿ ವಿಜಯಪುರ 2] ಮಹಾಂತೇಶ ಶರಣಪ್ಪ ಡಬ್ಬಿಗೇರ ಉ: ಕೂಲಿ ಸಾ॥ ಚಿಕ್ಕರೂಗಿ ತಾ:ಇಂಡಿ ಜಿ:ವಿಜಯಪುರ 3] ಜಾವೀದ ದಸ್ತಗೀರಸಾಬ ಕೋಲಾರ ಸಾ॥ ಚಿಕ್ಕರೂಗಿ ತಾ:ಇಂಡಿ ಜಿ:ವಿಜಯಪುರ 4] ಆಕಾಶ ಕೇಶವ ಬಿಸೆ ಸಾ॥ ರಜಪೂತ ಗಲ್ಲಿ ವಿಜಯಪುರ 5] ಮರಗು ಉತ್ತಮ ಹಕ್ಕಿ ಸಾ॥ ಅಲಿಯಾಬಾದ ಪಾಂಗ್ರೂನದೊಡ್ಡಿ 6] ರಾಜು ಚಂದ್ರಕಾಂತ ವಡ್ಡರ ಸಾ॥ ಶಿಕಾರಖಾನೆ ವಿಜಯಪುರ 7] ಪ್ರವೀಣ ಶಿವಪುತ್ರ ಅಲಿಯಾಬಾದ ಸಾ॥ ಅಲ್ಲಾಪೂರ ಓಣಿ ವಿಜಯಪುರ 8] ಪ್ರವೀಣ ಚಂದ್ರಕಾಂತ ಮೇಲಿನಮನಿ ಸಾ॥ ಹೊನ್ನುಟಗಿ 9] ಸಂತೋಷ ಶಿವಪ್ಪ ಹಿಪ್ಪರಗಿ ಸಾ॥ ಹೊನ್ನುಟಗಿ 10] ಮಿಥುನ ಚಿದಾನಂದ ಸಂಕದ ಸಾ॥ ಹೊನ್ನುಟಗಿ 11] ವಿಜಯಕುಮಾರ ಬಸಲಿಂಗಪ್ಪ ಬಿಸನಾಳ ಸಾ॥ ಹೊನ್ನುಟಗಿ 12] ವಿಠ್ಠಲ ಚಂದ್ರಾಮ ಮಣ್ಣೂರ ಸಾ॥ ಹೊನ್ನುಟಗಿ 13] ಉಮೇಶ ಮಡಿವಾಳಪ್ಪ ಚೂರಿ ಸಾ॥ ಹೊನ್ನುಟಗಿ ಇವರು ಮಹಲ ಐನಾಪುರ ಗ್ರಾಮದ ಹತ್ತಿರ ಸಾರ್ವಜನಿಕ ಹಳ್ಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ–ಬಾಹರ ಅಂಬುವ ಇಸ್ಪೇಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಜಿ.ಎಸ್..ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.09.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನೆ ನಂ: 146/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ: 08.09.2021 ರಂದು 10.40 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಈರಣ್ಣ ಬಸಪ್ಪ ಕುಂಬಾರ, ಸಾ: ಮುಳಸಾವಳಗಿ, ತಾ: ದೇವರ ಹಿಪ್ಪರಗಿ 2) ಕಲ್ಲಪ್ಪ ಷಣ್ಮುಖಪ್ಪ ಇಂಡಿ, ಸಾ: ನಿವಾಳಖೇಡ, ತಾ: ದೇವರ ಹಿಪ್ಪರಗಿ 3) ಬಸವರಾಜ ತಿಪ್ಪಣ್ಣ ನಾಟಿಕಾರ ಸಾ: ಮುಳಸಾವಳಗಿ, ತಾ: ದೇವರ ಹಿಪ್ಪರಗಿ 4) ಧರ್ಮಣ್ಣ ಸಾಯಬಣ್ಣ ನಾಯ್ಕೋಡಿ, ಸಾ: ಮುಳಸಾವಳಗಿ, ತಾ: ದೇವರ ಹಿಪ್ಪರಗಿ 5) ಸಾಯಬಣ್ಣ ಸಂಗಪ್ಪ ಚಾಂದಕವತೆ, ಸಾ: ಮುಳಸಾವಳಗಿ, ತಾ: ದೇವರ ಹಿಪ್ಪರಗಿ, 6) ಶರಮುದ್ದೀನ ಸಯ್ಯದಸಾಬ ಬೇಪಾರಿ, ಸಾ: ದೇವರ ಹಿಪ್ಪರಗಿ 7) ಮಲಕಪ್ಪ ಅಮ್ಮಣ್ಣ ತಳವಾರ, ಸಾ: ಮುಳಸಾವಳಗಿ, ತಾ: ದೇವರ ಹಿಪ್ಪರಗಿ 8) ಮನೋಜಕೂಮಾರ ಶರಣಪ್ಪ ಕರಕಲಮೇನಿ ಹಿಂದೂ ತಳವಾರ ಸಾ:ಮುಳಸಾವಲಗಿ ತಾ;ದೇವರ ಹಿಪ್ಪರಗಿ 9) ಶಿವಪ್ಪ ಅರವಿಂದ ಸೋನ್ನಳ್ಳಿ ಹಿಂದೂ ತಳವಾರ ಸಾ:ಮುಳಸಾವಳಗಿ ತಾ; ದೇವರ ಹಿಪ್ಪರಗಿ ಇವರು ತಮ್ಮ ತಮ್ಮ ಫಾಯಿದೆಗೊಸ್ಕರ ಪಡಗಾನೂರ ಗ್ರಾಮದ ಸಿಮಾಂತರದ ಜೋಗುರ ಸ್ಟೋನ ಕ್ರಷರ್ ಹತ್ತಿರ ಖುಲ್ಲಾ ಜಾಗೆಯಲ್ಲಿ ಅಂದರ ಬಾಹರ ಎನ್ನುವ ಇಸ್ಪೇಟ ಜೂಜಾಟವನ್ನು ಗುಂಪಾಗಿ ಕುಳಿತು ಆಡುತಿದ್ದಾಗ ಸಿಕ್ಕಿದ್ದು ಅದೆ. ಈ ಬಗ್ಗೆ ಸ:ತ: ರವಿ ಯಡವನ್ನರ. ಪಿ.ಎಸ್.ಐ ದೇವರ ಹಿಪ್ಪರಗಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.09.2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.